# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಡವಳಿಗಳು

ವಿಷಯ: ಪಾಲಿಕೆಯ ಆರೋಗ್ಯ ಮತ್ತು ನೈರ್ಮಲ್ಯ ಶಾಖೆಗೆ ಅಭಿಯಂತರರನ್ನು ವರ್ಗಾವಣೆ/ನಿಯೋಜಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿರವರ ಆದೇಶ ಸಂಖ್ಯೆ: ಬಿಬಿಎಂಪಿ/ಮುಆ/ಆಶಾ/ಪಿ.ಆರ್/47/24-25, ದಿನಾಂಕ: 23.05.2024.
2. ಉಪ ಆಯುಕ್ತರು, ಬಿಬಿಎಂಪಿರವರ ಆದೇಶ ಸಂಖ್ಯೆ: ಬಿ12(4)ಪಿ.ಆರ್/39/ 24-25, ದಿನಾಂಕ: 25.06.2024.
3. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿರವರ ಆದೇಶ ಸಂಖ್ಯೆ: ಬಿ12(6)/ಮುಆ/ಪಿ.ಆರ್/49/24-25, ದಿನಾಂಕ: 28.06.2024.

***********

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಲ್ಲೇಖ-01ರ ಆದೇಶದಂತೆ ಆರೋಗ್ಯ ಶಾಖೆಯನ್ನು ಆರೋಗ್ಯ ಮತ್ತು ನೈರ್ಮಲ್ಯ ಎಂದು ಮಾರ್ಪಡಿಸಿ ಘನತ್ಯಾಜ್ಯ ನಿರ್ವಹಣಾ ಕೋಶದ ವಿಶೇಷ ಆಯುಕ್ತರ (ಘನತ್ಯಾಜ್ಯ ನಿರ್ವಹಣೆ) / ಜಂಟಿ ಆಯುಕ್ತರು(ಘನಿ) ಹುದ್ದೆಗಳನ್ನು ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯಲ್ಲಿ ಅಂತರ್ಗತಗೊಳಿಸಿ ಜವಾಬ್ದಾರಿ ಮತ್ತು ಪಾತ್ರಗಳನ್ನು ಮರುಹಂಚಿಕೆ ಮಾಡಲಾಗಿರುತ್ತದೆ.

ಉಲ್ಲೇಖ-01 ರನ್ವಯ ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯು ದೈನಂದಿನ ಪ್ರಾಥಮಿಕ ಜವಾಬ್ದಾರಿಗಳೊಂದಿಗೆ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪೌರಕಾರ್ಮಿಕರ ವಿಷಯಗಳು, ಶೌಚಾಲಯಗಳ ವಿಷಯಗಳು ಮತ್ತು ಸ್ವಚ್ಛ ಸರ್ವೇಕ್ಷಣ ಕಾರ್ಯಗಳ ಉಸ್ತುವಾರಿಯನ್ನು ಮಾತ್ರ ವಹಿಸಲು ಆದೇಶಿಸಲಾಗಿದ್ದು, ಇನ್ನುಳಿದ ಘನತ್ಯಾಜ್ಯ ನಿರ್ವಹಣೆಯ ಮುಖ್ಯ ಕಾರ್ಯಗಳಾದ ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿದ ಎಲ್ಲಾ ಜವಾಬ್ದಾರಿಗಳೊಂದಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2016, ಕಟ್ಟಡ ಮತ್ತು ಭಗ್ನಾವಶೇಷ ತ್ಯಾಜ್ಯ ನಿರ್ವಹಣಾ ನಿಯಮಗಳು-2016, ಘನತ್ಯಾಜ್ಯ ನಿರ್ವಹಣಾ ಬೈ-ಲಾ 2020, ಇತರೆಗಳ ತ್ವರಿತ ಅನುಷ್ಠಾನ ಹಾಗೂ ಪ್ರಾಣಿತ್ಯಾಜ್ಯ ನಿರ್ವಹಣೆ, ಸ್ಥಳೀಯ ಹಾನಿಕಾರಕ ತ್ಯಾಜ್ಯ ನಿರ್ವಹಣೆ ಇತರೆ ಕಾರ್ಯಗಳನ್ನು ಕಂಪನಿಗಳ ಕಾಯ್ದೆ 2013ರಡಿ ಹಾಗೂ ಮಾನ್ಯ ಆಡಳಿತಗಾರರ/ಕೌನ್ಸಿಲ್ ಸಭೆಯ ನಿರ್ಣಯದ ವಿಷಯ ಸಂಖ್ಯೆ:148/2022-23 & 286/2022-23ರಂತೆ ಸ್ಥಾಪಿಸಲಾಗಿರುವ ಸರ್ಕಾರಿ ಸ್ವಾಮ್ಯದ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತಕ್ಕೆ ವಹಿಸಿ ಕಾರ್ಯಗಳ ಉಸ್ತುವಾರಿಯನ್ನು ನಿರ್ವಹಿಸಲು ಉಲ್ಲೇಖ (03)ರನ್ವಯ ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ 18 ಜನ ಪರಿಸರ ಅಭಿಯಂತರರು (07 ಸ.ಕಾ.ಅ ಮತ್ತು 11 ಪರಿಸರ ಅಭಿಯಂತರರು) ರವರನ್ನು ನಿಯೋಜಿಸಿ ಆದೇಶಿಸಲಾಗಿರುತ್ತದೆ.

ಮುಂದುವರೆದು, ಘನತ್ಯಾಜ್ಯ ನಿರ್ವಹಣಾ ಕೋಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ಪರಿವೀಕ್ಷಕರು (ಹೊರಗುತ್ತಿಗೆ) ರವರುಗಳನ್ನು ಉಲ್ಲೇಖ-(02)ರನ್ವಯ ಈಗಾಗಲೇ ವಿಶೇಷ ಆಯುಕ್ತರು (ಆರೋಗ್ಯ ಮತ್ತು ನೈರ್ಮಲ್ಯ) ರವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಲು ಆದೇಶಿಸಲಾಗಿರುತ್ತದೆ.

ಆದರೆ, ಆರೋಗ್ಯ ಮತ್ತು ನೈರ್ಮಲ್ಯ ಶಾಖೆಗೆ ವಹಿಸಲಾದ 04 ಜವಾಬ್ದಾರಿಗಳನ್ನು (ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪೌರಕಾರ್ಮಿಕರ ವಿಷಯಗಳು, ಶೌಚಾಲಯಗಳ ವಿಷಯಗಳು ಮತ್ತು ಸ್ವಚ್ಛ ಸರ್ವೇಕ್ಷಣ ಕಾರ್ಯಗಳ) ಕೇಂದ್ರ/ವಲಯ/ವಿಭಾಗೀಯ ಮಟ್ಟದಲ್ಲಿ ನಿರ್ವಹಿಸಲು ಅಭಿಯಂತರರುಗಳ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ**

**ಸಂಖ್ಯೆ: ಬಿ12(6)ಪಿಆರ್/49 /24-25** **ದಿನಾಂಕ: 6.7.24.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಭಿಯಂತರರುಗಳನ್ನು ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯ ಇತರೆ ಕಾರ್ಯಗಳೊಂದಿಗೆ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ,

SDA | Kavei 06/07/24

DEPUTY CHIEF INFORMATION OFFICER - (IT)
BRUHAT BENGALURU MAHANAGARA PALIKE

ಪೌರಕಾರ್ಮಿಕರ ವಿಷಯಗಳು, ಶೌಚಾಲಯಗಳ ವಿಷಯಗಳು ಮತ್ತು ಸ್ವಚ್ಛ ಸರ್ವೇಕ್ಷಣ ಕಾರ್ಯಗಳನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ನೈರ್ಮಲ್ಯ) ಅಧೀನದಲ್ಲಿ ನಿರ್ವಹಿಸಲು ನೇಮಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಹೆಸರು | ಪ್ರಸ್ತುತ ಹುದ್ದೆ | ಸದರಿಯವರ ಸೇವೆಯನ್ನು ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯ ಸುಪರ್ಧಿಗೆ ನೀಡಿ ಕಾರ್ಯನಿರ್ವಹಿಸಲು ನಿಯೋಜಿಸಿರುವ ಸ್ಥಳ |
|---|---|---|---|
| 1. | ಶ್ರೀ ರುದ್ರಮುನಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಹೆಬ್ಬಾಳ ವಿಭಾಗದಲ್ಲಿಯೇ ಮುಂದುವರೆಸಿದೆ. |
| 2. | ಶ್ರೀ ಉಮೇಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಪುಲಿಕೇಶಿನಗರ ವಿಭಾಗದಲ್ಲಿಯೇ ಮುಂದುವರೆಸಿದೆ. |
| 3. | ಶ್ರೀ ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಶಾಂತಿನಗರ ವಿಭಾಗದಲ್ಲಿಯೇ ಮುಂದುವರೆಸಿದೆ. |
| 4. | ಶ್ರೀಮತಿ ಸಂಗೀತಾ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಚಾಮರಾಜಪೇಟೆ ವಿಭಾಗದಲ್ಲಿಯೇ ಮುಂದುವರೆಸಿದೆ. |
| 5. | ಶ್ರೀ ರಂಗಸ್ವಾಮಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಚಿಕ್ಕಪೇಟೆ ವಿಭಾಗದಲ್ಲಿಯೇ ಮುಂದುವರೆಸಿದೆ. |
| 6. | ಶ್ರೀ ಮಂಜುನಾಥ ಟಿ ಆರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಪದ್ಮನಾಭನಗರ ವಿಭಾಗದಲ್ಲಿಯೇ ಮುಂದುವರೆಸಿದೆ. |
| 7. | ಶ್ರೀ ವರ ನಾರಾಯಣ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಆರ್ ಆರ್ ನಗರ ವಿಭಾಗದಲ್ಲಿಯೇ ಮುಂದುವರೆಸಿದೆ. |
| 8. | ಶ್ರೀ ವಿಶ್ವನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಯಲಹಂಕ ವಿಭಾಗದಲ್ಲಿಯೇ ಮುಂದುವರೆಸಿದೆ. |
| 9. | ಶ್ರೀ. ಶಿವಕುಮಾರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) | ಬ್ಯಾಟರಾಯನಪುರ ವಿಭಾಗದಲ್ಲಿಯೇ ಮುಂದುವರೆಸಿದೆ. |

ಈ ಮೇಲ್ಕಂಡ ಆದೇಶವು ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ಷರತ್ತುಗಳು:**

1. ತಕ್ಷಣದಿಂದ ಜಾರಿಗೆ ಬರುವಂತೆ ಮೇಲ್ಕಂಡ ಅಭಿಯಂತರರುಗಳು ವಿಶೇಷ ಆಯುಕ್ತರು (ಆರೋಗ್ಯ ಮತ್ತು ನೈರ್ಮಲ್ಯ ಶಾಖೆ) ರವರಿಗೆ ವರದಿ ಮಾಡಿಕೊಳ್ಳುವುದು.
2. ವಿಶೇಷ ಆಯುಕ್ತರು (ಆರೋಗ್ಯ ಮತ್ತು ನೈರ್ಮಲ್ಯ ಶಾಖೆ) ರವರು ತಮ್ಮ ಶಾಖೆಗೆ ಇತರೆ ಅಭಿಯಂತರರುಗಳು ನಿಯೋಜನೆಗೊಳ್ಳುವವರೆಗೂ ಮೇಲ್ಕಂಡ ಅಭಿಯಂತರರು ರವರಿಗೆ ಅಧಿಕ ವಿಭಾಗಗಳ ಕಾರ್ಯಹಂಚಿಕೆಯನ್ನು ಮಾಡಿ ಆದೇಶವನ್ನು ಹೊರಡಿಸುವುದು.
3. ಸದರಿಯವರುಗಳು ವಿಶೇಷ/ಜಂಟಿ ಆಯುಕ್ತರು (ಆರೋಗ್ಯ ಮತ್ತು ನೈರ್ಮಲ್ಯ ಶಾಖೆ) ರವರ ಅಧೀನದಲ್ಲಿ ಹಾಗೂ ಇವರ ಆದೇಶದಂತೆ ಮತ್ತು ಮೇಲುಸ್ತುವಾರಿ ಅಧಿಕಾರಿಗಳ ನಿರ್ದೇಶನದಂತೆ ಕಾರ್ಯನಿರ್ವಹಿಸುವುದು.
4. ಸದರಿಯವರುಗಳು ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪೌರಕಾರ್ಮಿಕರ ವಿಷಯಗಳು, ಶೌಚಾಲಯಗಳ ವಿಷಯಗಳು ಮತ್ತು ಸ್ವಚ್ಛ ಸರ್ವೇಕ್ಷಣ ಕಾರ್ಯಗಳಿಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತಕ್ಕೆ ನಿಯೋಜನೆಗೊಂಡ ಆಯಾ ವಿಭಾಗೀಯ ಪದಮುಕ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನಿ) ರವರಿಂದ ಹಸ್ತಾಂತರಿಸಿಕೊಂಡು ಕಾರ್ಯನಿರ್ವಹಿಸುವುದು ಮತ್ತು ಪ್ರಭಾರವನ್ನು ಸ್ವೀಕರಿಸುವುದು.
5. ಸದರಿಯವರುಗಳಿಗೆ ಪ್ರತಿಮಾಹೆ ವೇತನ ಮತ್ತು ಸರ್ಕಾರದ ಆದೇಶದನುಸಾರ ಅರ್ಹಭತ್ಯೆಗಳನ್ನು ವಿಭಾಗೀಯ ವೇತನ ಬಟವಾಡೆ ಅಧಿಕಾರಿಯ ಕಛೇರಿಯಿಂದಲೇ ಪಾವತಿಸುವುದು.

6. ಸದರಿಯವರುಗಳಿಗೆ ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯ ಕಾರ್ಯಗಳನ್ನು ಹೊರತುಪಡಿಸಿ, ಅನ್ಯ ಶಾಖೆಯ ಬೇರೆ ಯಾವುದೇ ಕೆಲಸ ಕಾರ್ಯಗಳನ್ನು ಅಧಿಕ ಪ್ರಭಾರದ ಮೇಲೆ ಹಂಚಿಕೆ ಮಾಡತಕ್ಕದ್ದಲ್ಲ.
7. ಸದರಿ ಅಭಿಯಂತರರುರವರು ಯಾವುದೇ ಕಾರಣಕ್ಕೂ ಅನ್ಯ ಶಾಖೆಯ ಇನ್ನೊಂದು ಹುದ್ದೆಗೆ ಅಧಿಕ ಪ್ರಭಾರದ ಮೇಲೆ ನಿಯೋಜಿಸುವಂತೆ ಕೋರಿಕೆ ಸಲ್ಲಿತಕ್ಕದ್ದಲ್ಲ.
8. ಮೇಲ್ಕಂಡ ಅಭಿಯಂತರರುರವರು ಕರ್ತವ್ಯ ಲೋಪ ಎಸಗಿದ್ದಲ್ಲಿಅಥವಾ ಇವರುಗಳ ವಿರುದ್ಧ ಯಾವುದೇ ಶಿಸ್ತು ಕ್ರಮದ ಪ್ರಸ್ತಾವನೆ ಕೈಗೊಳ್ಳಬೇಕಾದಲ್ಲಿ ಆಡಳಿತ ಶಾಖೆಗೆ ಮಾಹಿತಿ ನೀಡುವುದು.

ಮೇಲ್ಕಂಡ ಆದೇಶದನ್ವಯ ಅಭಿಯಂತರರುಗಳು ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯಲ್ಲಿ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುವುದು. ಹಾಗೂ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳುವುದು.

Sd/- 6/7.

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6/7/2024 6/7/24

**ಪ್ರತಿಯನ್ನು:**

: ಮಾನ್ಯ ಆಡಳಿತಗಾರರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ(ಕಂಪನಿ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ) / (ಯೋಜನೆ) ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಆಯುಕ್ತರುರವರಿಗೆ ಮಾಹಿತಿಗಾಗಿ ಕಳುಹಿಸಿದೆ.
: ವಿಶೇಷ ಆಯುಕ್ತರು (ಆರೋಗ್ಯ ಮತ್ತು ನೈರ್ಮಲ್ಯ) ರವರಿಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಮಾಹಿತಿ ತಂತ್ರಜ್ಞಾನ) ರವರಿಗೆ ಕಳುಹಿಸಿದೆ.
: ಎಲ್ಲಾವಲಯ ಅಪರ / ಜಂಟಿ ಆಯುಕ್ತರುರವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಕಳುಹಿಸಿದೆ.
: ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಕಳುಹಿಸಿದೆ.
: ಎಲ್ಲಾ ವಿಭಾಗಗಳ ಸ.ಕಾ.ನಿ.ಅ (ಘನತ್ಯಾಜ್ಯನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರುರವರಿಗೆ ಕಳುಹಿಸುತ್ತಾ, ಸದರಿ ಆದೇಶದ ಪ್ರತಿಯನ್ನು ಪಾಲಿಕೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಕಳುಹಿಸಿದೆ.(DCIO)
: ಸಂಬಂಧಪಟ್ಟ ಎಲ್ಲಾ ಅಭಿಯಂತರರುಗಳಿಗೆ.
: ಕಛೇರಿ ಪ್ರತಿ.

ಉಪ ಮುಖ್ಯ ಮಾಹಿತಿ ಅಧಿಕಾರಿ
(ಮಾಹಿತಿ ತಂತ್ರಜ್ಞಾನ) ರವರ ಕಛೇರಿ
ಸಂಖ್ಯೆ: 470
ದಿನಾಂಕ: 06/07/2024
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್.ಚೌಕ, ಬೆಂಗಳೂರು